ವಿಪರೀತ ಶುಗರ್ ಇದೆ. ನಾನೇ ಮಾತ್ರೆ ಕೊಡಬೇಕು. ಅವಳಾಗಿಯೇ ಎಂದೂ ಮಾತ್ರೆ ತೆಗೆದುಕೊಂಡಿದ್ದೇ ಇಲ್ಲ! ಅಂಥ ಮರೆವುಗೇಡಿ ಅವಳು! ಅವಳೆಂದರೆ ನನಗೆ ತುಂಬಾ ಪ್ರೀತಿ. ಅಂಥದರಲ್ಲಿ ಆಕೆಗೆ ಹೇಳದೇ ಹೇಗೆ ನಿನ್ನೊಂದಿಗೆ ಬರಲಿ!? ಇರು, ಬಂದೆ… ನೀನು ಇಷ್ಟೊಂದು ಅವಸರ ಮಾಡಿದರೆ ಹೇಗೆ..!?' ಎಂದು ಉದ್ಯಾನದ ತುಂಬೆಲ್ಲ ಪ್ರತಿಧ್ವನಿಸುವಂತೆ ಜೋರಾಗಿ ಅರಚತೊಡಗಿದ! ಆದರೆ ನಿಜ ಹೇಳಬೇಕೆಂದರೆ ಆತ ಅಂದುಕೊಂಡಂತೆ ಅಲ್ಲೇನೂ ನಡೆದೇ ಇರಲಿಲ್ಲ! ವಿಚಿತ್ರವೆಂಬಂತೆ ತಾನೊಬ್ಬನೇ ಮೇಲೆ ಆಕಾಶಕ್ಕೆ ಮುಖಮಾಡಿ ಏನೇನೋ ಅರಚಿದವರಂತೆ ಮಾತಾಡಿಕೊಳ್ಳುತ್ತಿದ್ದಾನೆ! ಆ ಕ್ಷಣದಲ್ಲಿ ಆತನ ವರ್ತನೆಯನ್ನು ಕಂಡು ವಾಯುವಿಹಾರಕ್ಕೆಂದು ಬಂದ ಉದ್ಯಾನದಲ್ಲಿದ್ದ ಜನರೆಲ್ಲ ಈತನನ್ನು ಹುಚ್ಚನಿರಬೇಕು ಎಂದು ತಮ್ಮೊಳಗೆ ಮಾತಾಡಿಕೊಳ್ಳುತ್ತಾ, ಹುಸಿ ನಗೆಯಲ್ಲಿ ಹಾಸ್ಯಚಟಾಕಿ ಹಾರಿಸುತ್ತಾ ಅಲ್ಲಿಂದ ಹೊರಟುಹೋದರು. ಆಗ, ಆತನ ಹೆಂಡತಿಯೂ ಸಹ ಹಾಗೇ ಅಂದುಕೊಂಡಳು. ಅದರಂತೆ ಅದೇ ಗುಂಗಿನಲ್ಲಿ ತನಗೆ ಹೊತ್ತು ಹೋದದ್ದೇ ಗೊತ್ತಾಗಲಿಲ್ಲ ಎನ್ನುವವರೆಗೆ ಮುಖದಲ್ಲಿ ನೋವು, ವಿಷಾದ, ಸಂಕಟಗಳನ್ನೆಲ್ಲ ಒಟ್ಟೊಟ್ಟಿಗೆ ತುಂಬಿಕೊಂಡು ಆತನನ್ನೇ ನೋಡುತ್ತಾ ನಿಂತಳು. ಅಷ್ಟೊತ್ತಿಗಾಗಲೇ ಉದ್ಯಾನವೆಲ್ಲ ಖಾಲಿಯಾಗಿ ಥೇಟ್ ಸ್ಮಶಾನದಂತೆ ಬಣಗುಡುತ್ತಿತ್ತು! ಇದೆಲ್ಲ ಆಕೆಗೆ ರೇಜಿಗೆ ತರಿಸಲು, 'ನಿನಗೇನೋ ಆಗಿದೆ ಎಂದುಕೊಳ್ಳುವಷ್ಟರಮಟ್ಟಿಗೆ ನೀನು ಲೌಕಿಕದಿಂದ ಕಳಚಿಕೊಂಡಿರುವೆ' ಎನ್ನುತ್ತಾ ಕೈಹಿಡಿದು ದರದರನೆ ಎಳೆದುಕೊಂಡು ಬಂದವರಂತೆ ಮನೆಗೆ ಕರೆದುಕೊಂಡು ಬಂದಳು.

ಆಕೆ ಮನೆಗೆ ಬಂದಾಗ ಮನೆತುಂಬಾ ನೀರವ ಮೌನ ತುಂಬಿಕೊಂಡಿತ್ತು. ಆದರೆ ಆ ನೀರವ ಮೌನದ ನಡುವೆಯೇ ಆಕೆಗೆ ಏನೋ ಒಂಥರ ಗೊರಗೊರ ಸಪ್ಪಳ ಕೇಳಿಸಿದಂಗಾಯಿತು. ಆದರೆ ಅದು ಆತನ ಬಿಸಿಯುಸಿರು ಆಗಿತ್ತಾದ್ದರಿಂದ ಅದು ಆಕೆಯ ಮೈಗೆ ಬಂದು ತಾಕುತ್ತಿದ್ದಂಗೆ ಚಿಂತೆಗೆ ಬಿದ್ದಳು. ಮರು ಗಳಿಗೆಯಲ್ಲಿ, ಹೀಗೇ ಬಿಟ್ಟರೆ ಪರಿಸ್ಥಿತಿ ಹದಗೆಡುತ್ತದೆ ಎಂದುಕೊಂಡು ಆತನನ್ನು ಮನೋವೈದ್ಯರ ಹತ್ತಿರ ಕರೆದುಕೊಂಡು ಹೋಗಲು ನಿರ್ಧರಿಸಿದಳು. ಆಕೆ ಅಂದುಕೊಂಡಂತೆ ಮರುದಿನವೇ ಮನೋವೈದ್ಯರ ಬಳಿ ಕರೆದುಕೊಂಡು ಹೋದಳು. ಅಲ್ಲಿ, ವೈದ್ಯರು ಆತನನ್ನು ಎಲ್ಲ ರೀತಿಯಲ್ಲೂ ಪರೀಕ್ಷಿಸಿ ನೋಡಿದರು. ಕೊನೆಗೆ ಆತನ ಆರೋಗ್ಯ ಸರಿಯಾಗಿಯೇ ಇದೆ. ಆತನಿಗೆಲ್ಲೋ ತಾನು ಐಹಿಕವಾಗಿ ಇಲ್ಲವಾಗುತ್ತಿರುವೆನೇನೋ ಎಂಬ ಭ್ರಾಂತಿ ಇರಬೇಕು ಎಂದುಕೊಂಡು, ಆತನ ಹೆಂಡತಿಯ ಸಮಾಧಾನಕ್ಕೆ ಒಂದಿಷ್ಟು ಮಾತ್ರೆಗಳನ್ನು ಬರೆದುಕೊಟ್ಟು, ಮನೆಯಲ್ಲಿ ವಿಶ್ರಾಂತಿ ಪಡೆಯಲು ಹೇಳಿ ಕಳಿಸಿದರು.

ಆತನ ಪಾಲಿಗೆ ತುಸು ದಿನಗಳು ಹೇಗೋ ಕಳೆದು ಹೋದವು. ಆಗಲೇ, ಮನೋವೈದ್ಯರು ಕೊಟ್ಟ ಮಾತ್ರೆಗಳ ಪ್ರಭಾವವೊ ಏನೋ ಎಂಬಂತೆ ನೋಡು ನೋಡುತ್ತಿದ್ದಂತೆಯೇ ಹೊಳೆಯಲ್ಲಿ ಹೊಸ ನೀರು ಹರಿದು, ಹೂವುಗಳು ಅರಳಿ, ಗಿಡಗಂಟಿಗಳ ಕೊರಳಲ್ಲಿ ಹಸಿರು ಚಿಗುರಿ ನಿಂತಷ್ಟೇ ಚೆಲುವಾಗಿ ಆತ ಗೆಲುವಾದ! ಇದೆಲ್ಲ ಆತನ ಹೆಂಡತಿಗೆ ಸಮಾಧಾನ ತಂದಿತು. ಆಕೆ, ಇನ್ನೇನು ಎಲ್ಲವೂ ಸರಿಯಾಯಿತು ಎಂದುಕೊಳ್ಳುವಾಗಲೇ ಇತ್ತ ಆತನಿಗೆ ಮತ್ತೇ ಆ ಮುಖದ ದರ್ಶನವಾಗತೊಡಗಿತು! ಆ ಮುಖ ಆತನ ಮನಸ್ಸಿನೊಳಗೆ, ಗಾಳಿಯಲ್ಲಿ ವಿಕಾರವಾಗಿ ಬೆಳೆಯುತ್ತ ಬೆಳೆಯುತ್ತ ಬಲೂನಿನಂತೆ ದೊಡ್ಡದಾಗುತ್ತ ಹೋದಂತೆ ಹೋಗತೊಡಗಿತು. ಹೀಗಾಗಿ, ದಿನ ಕಳೆದಂತೆ ಆತನ ಮನಸ್ಸಿನ ಸ್ವಾಸ್ಥ್ಯ ನಾಶವಾಗುತ್ತಾ ಹೊರಟಿತು. ಇದರಿಂದಾಗಿ ಕುಗ್ಗಿ ಹೋದ ಆತ ಮತ್ತೊಮ್ಮೆ ಮೊದಲಿನಂತೆಯೇ ಊಟ, ನಿದ್ರೆ, ನೀರಡಿಕೆ –ಹೀಗೆ ಎಲ್ಲವನ್ನೂ ಎಲ್ಲರನ್ನೂ ಏಕಕಾಲದಲ್ಲಿ ತೊರೆದು ಆ ಮುಖದ ಕುರಿತಾಗಿಯೇ ಚಿಂತಿಸತೊಡಗಿದ. ವಿಚಿತ್ರವೆಂದರೆ ಅದರ ಗುಂಗಿನಲ್ಲಿ ಹೆಂಡತಿ, ಮಕ್ಕಳು, ಮೊನ್ನೆ ಮೊನ್ನೆಯಷ್ಟೇ ಕಟ್ಟಿಸಿದ ಹೊಸ ಮನೆ –ಹೀಗೆ ಎಲ್ಲವೂ ಎಲ್ಲಿ ತನ್ನಿಂದ ದೂರವಾಗತೊಡಗಿವೆಯೋ ಏನೋ ಎಂದು ಇನ್ನಿಲ್ಲದಂಗೆ ರೋದಿಸತೊಡಗಿದ. ಅಷ್ಟಕ್ಕೂ ತನ್ನ ಹೆಂಡತಿಗೂ ಸಹ ತಿಳಿಯದಂತೆ ಬ್ಯಾಂಕ್‌ನಲ್ಲಿ ಲಕ್ಷಗಟ್ಟಲೆ ಕೂಡಿಟ್ಟ ಲಂಚದ ಹಣ ಬೇರೆಯವರ ಪಾಲಾಗುತ್ತದಲ್ಲ… ಎಂದು ತನ್ನಷ್ಟಕ್ಕೆ ಮಾತನಾಡಿಕೊಳ್ಳಲು ಶುರು ಮಾಡಿದ. ಇದೆಲ್ಲ ಆತನ ಹೆಂಡತಿಗೆ ಮುಜುಗರ ತರಲಾರಂಭಿಸಿತು. ಹೀಗಾಗಿ